ಹುಡುಗನೊಬ್ಬನ ದೃಷ್ಟಿಕೋನದಲ್ಲಿ ಇಡೀ ಸಿನಿಮಾ ರೂಪುಗೊಂಡಿದೆ. ದೊಡ್ಡವರ ದೃಷ್ಟಿಯಲ್ಲಿ ಅವೆಲ್ಲವೂ ಸಹಜ, ವಿಶೇಷವಲ್ಲದ ವಿಷಯಗಳು. ಆದರೆ ಅವನಿಗೆ ಅದೇ ವಿಷಯಗಳು ಹತ್ತು ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತವೆ. ಅವನ ಮನಸ್ಸಲ್ಲಿ ಏಳುವ ಪ್ರಶ್ನೆಗಳಿಗೆ ಅವನೇ ಉತ್ತರ ಕಂಡುಕೊಳ್ಳುವ ಪ್ರಯತ್ನದಲ್ಲಿ ಸಿನಿಮಾದ ಕಥೆ ಬೆಳೆಯುತ್ತ ಹೋಗುತ್ತದೆ' ಎಂದು ಅವರು ಕಥನದ ಕ್ಯಾನ್ವಾಸ್ ಬಿಚ್ಚಿಡುತ್ತಾರೆ.

ನಿರ್ದೇಶನಕ್ಕೆ ಇಳಿಯುವ ಮೊದಲು, ಈ ಸಿನಿಮಾದ ಕಥೆಯನ್ನು ಗಣೇಶ್ ಹಲವರ ಜೊತೆಗೆ ಚರ್ಚಿಸಿದ್ದಾರೆ. ಸಿನಿಮಾದ ಮುಖ್ಯಪಾತ್ರದ ಮನಸ್ಸಲ್ಲಿ ಮೂಡುವ ಪ್ರಶ್ನೆಗಳು ಎಲ್ಲರ ಮನಸ್ಸಲ್ಲಿಯೂ ಒಂದಲ್ಲಾ ಒಂದು ಹಂತದಲ್ಲಿ ಮೂಡಿವೆ ಎಂಬುದು ಆ ಚರ್ಚೆಯಲ್ಲಿ ಅವರಿಗೆ ಗೊತ್ತಾಗಿದೆ. ಅದೇ ಅವರಿಗೆ ಈ ಸಿನಿಮಾ ಮಾಡಲು ಧೈರ್ಯವನ್ನೂ ಕೊಟ್ಟಿದೆ.

ಸಂಪೂರ್ಣ ಚಿತ್ರವನ್ನು ಶಿರಸಿಯಲ್ಲಿಯೇ ಚಿತ್ರೀಕರಿಸಿದ್ದು, ಅಲ್ಲಿನ ಪ್ರಾದೇಶಿಕ ಸೊಗಡನ್ನು ಆದಷ್ಟೂ ಹದಗೆಡದ ಹಾಗೆ ಸಿನಿಮಾದೊಳಗೆ ಬಳಸಿಕೊಳ್ಳುವ ಪ್ರಯತ್ನವನ್ನು ಮಾಡಿದ್ದಾರಂತೆ. ಕಳೆದ ವರ್ಷ ಲಾಕ್‌ಡೌನ್‌ಗಿಂತ ತುಸು ಮೊದಲು ಶೂಟಿಂಗ್ ಮುಗಿಸಿ ಲಾಕ್‌ಡೌನ್ ಸಮಯದಲ್ಲಿ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರೈಸಿದ್ದಾರೆ.

ಇವರ ಪ್ರಯತ್ನಕ್ಕೆ ದಕ್ಷಿಣಭಾರತದ ಖ್ಯಾತ ನಟ ವಿಜಯ್ ಸೇತುಪತಿ ಬೆಂಬಲ ನೀಡಿರುವುದು ತಂಡದ ಸ್ಥೈರ್ಯವನ್ನು ಹೆಚ್ಚಿಸಿದೆ. 'ಸ್ನೇಹಿತರ ಸಂಪರ್ಕದ ಮೂಲಕ ವಿಜಯ್ ಸೇತುಪತಿ ಈ ಸಿನಿಮಾವನ್ನು ನೋಡಿ ಮೆಚ್ಚಿದ್ದಾರೆ. ಹಾಗೆಯೇ ಅವರ ಬ್ಯಾನರ್ ಅಡಿಯಲ್ಲಿ ಸಿನಿಮಾವನ್ನು ಪ್ರೆಸೆಂಟ್ ಮಾಡಲೂ ಒಪ್ಪಿಕೊಂಡಿದ್ದಾರೆ. ಮೊದಲ ಸಿನಿಮಾಗೇ ಅಂಥ ನಟನ ಬೆಂಬಲ ದೊರೆತಿದ್ದು ಖುಷಿ ಕೊಟ್ಟಿದೆ' ಎನ್ನುವ ಗಣೇಶ್‌ಗೆ, ಕನ್ನಡದಲ್ಲಿ ಇಂಥ ಸ್ವತಂತ್ರ ಸಿನಿಮಾಗಳನ್ನು ಆಸಕ್ತಿವಹಿಸಿ ನೋಡಿ ಬೆನ್ನುತಟ್ಟುವ ಸ್ಟಾರ್‌ಗಳ ಸಂಖ್ಯೆ ಕಡಿಮೆ ಎಂಬ ವಿಷಾದವೂ ಇದೆ.



ಗಣೇಶ ಹೆಗಡೆ

ತಮ್ಮ ಸಿನಿಮಾ ಬರೀ ಫೆಸ್ಟಿವಲ್‌ಗಳಿಗಷ್ಟೇ ಸೀಮಿತ ಆಗಬಾರದು, ಜನರಿಗೆ ತಲುಪಬೇಕು ಎಂಬ ಕಾಳಜಿಯೂ ಅವರಿಗಿದೆ. ಹಾಗಾಗಿ ಒಟಿಟಿ ವೇದಿಕೆಗಳ ಮೂಲಕ ಪ್ರೇಕ್ಷಕರನ್ನು ತಲುಪುವತ್ತ ಅವರು ಪ್ರಯತ್ನ ನಡೆಸಿದ್ದಾರೆ.

'ಪಕ್ಕಾ ಕಮರ್ಷಿಯಲ್ ಅಲ್ಲದ, ಪೂರ್ತಿ ಆರ್ಟ್ ಸಿನಿಮಾವೂ ಅಲ್ಲದ ಅವೆರಡರ ಗುಣವನ್ನೂ ಹೊಂದಿರುವ ಸಿನಿಮಾಗಳನ್ನು ನೋಡುವ ಪ್ರೇಕ್ಷಕರ ಸಮುದಾಯವೊಂದು ಕನ್ನಡದಲ್ಲಿ ಬೆಳೆಯುತ್ತಿದೆ. ನಮ್ಮ ಸಿನಿಮಾ ಅವರನ್ನು ಉದ್ದೇಶಿಸಿದ್ದು. ಈಗಲ್ಲದಿದ್ದರೂ ಆ ಸಮುದಾಯ ಮುಂದೆ ಎಂದಾದರೂ ಬಹುಸಂಖ್ಯಾತರು ಆಗಬಹುದು. ಆಗ ನಮ್ಮಂಥ ಇಂಡಿಪೆಂಡೆಂಟ್ ಸಿನಿಮಾಗಳು ಕಮರ್ಷಿಯಲ್ ಆಗಿಯೂ ಗೆಲ್ಲಲು ಸಾಧ್ಯ' ಎನ್ನುವ ಕನಸು ಅವರದ್ದು.

ಈಗಾಗಲೇ ತಮ್ಮ ಮುಂದಿನ ಸಿನಿಮಾದ ಚಿತ್ರಕಥೆಯ ರಚನೆಯಲ್ಲಿ ತೊಡಗಿರುವ ಗಣೇಶ್, 'ನೀಲಿ ಹಕ್ಕಿ'ಯನ್ನು ಪ್ರೇಕ್ಷಕರೆದೆಯ ನಭಕ್ಕೆ ಹಾರಿಬಿಟ್ಟು ಮುಂದಿನ ಸಿನಿಮಾ ಕೈಗೆತ್ತಿಕೊಳ್ಳಲು ನಿರ್ಧರಿಸಿದ್ದಾರೆ. 'ತಮ್ಮ ಮುಂದಿನ ಸಿನಿಮಾ ಬ್ರಿಡ್ಜ್ ಸಿನಿಮಾ ಪ್ರಕಾರಕ್ಕೆ ಸೇರಬಹುದು' ಎನ್ನುವ ಅವರಿಗೆ ಇಂಥ ಸಿನಿಮಾಗಳನ್ನು ನಿರಂತರವಾಗಿ ಮಾಡಿ ಪ್ರೇಕ್ಷಕರಿಗೆ ತಲುಪಿಸುವ ಕನಸಿದೆ.

■

# ರಶ್ಮಿಕಾ ಮಂದಣ್ಣ ಮದ್ವೆ ಸುದ್ದಿ!

'ರಶ್ಮಿಕಾ ಮಂದಣ್ಣ ತಮಿಳುನಾಡಿನ ಹುಡುಗನನ್ನು ಮದ್ವೆ ಆಗ್ತಾರಂತೆ' – ಹೀಗೊಂದು ಸುದ್ದಿ ಕಳೆದ ಕೆಲವು ದಿನಗಳಿಂದ ಕನ್ನಡ, ತಮಿಳು, ತೆಲುಗು ಚಿತ್ರರಂಗಗಳ ಹರಟೆಕಟ್ಟೆಗಳಲ್ಲಿ ಹರಿದಾಡುತ್ತಿದೆ. ಇದಕ್ಕೊಂದು ಅಧಿಕೃತ ಮೂಲ ಇಲ್ಲ. ಆದರೆ ಕೆಲವರು ಹೇಳುವ ಪ್ರಕಾರ ಸ್ವತಃ ರಶ್ಮಿಕಾ ಅವರೇ ತಮಿಳು ಹುಡುಗನ ಕೈ ಹಿಡಿಯುವ ಹಂಬಲ ವ್ಯಕ್ತಪಡಿಸಿದ್ದಾರಂತೆ.

ರಶ್ಮಿಕಾ ಮದುವೆಯ ಕುರಿತ ವಿವಾದಗಳು, ಗಾಳಿಸುದ್ದಿಗಳು ಹಬ್ಬುತ್ತಿರುವುದು ಇದೇ ಮೊದಲೇನಲ್ಲ. ಕನ್ನಡದ 'ಕಿರಿಕ್ ಪಾರ್ಟಿ', ತೆಲುಗಿನ 'ಗೀತ ಗೋವಿಂದ'ದಷ್ಟೇ ರಕ್ಷಿತ್ ಶೆಟ್ಟಿ ಜೊತೆಗಿನ ನಿಶ್ಚಿತಾರ್ಥ ಮುರಿದುಹೋಗಿದ್ದೂ ಸುದ್ದಿಯಾಗಿತ್ತು. ನಂತರ ರಶ್ಮಿಕಾ ತೆಲುಗು ಚಿತ್ರರಂಗದಲ್ಲಿ ಗೋಲ್ಡನ್ ಗರ್ಲ್ ಆದರು. ಅವಕಾಶಗಳು ಹಲವೆಡೆಯಿಂದ ಹುಡುಕಿ ಬರತೊಡಗಿತು. ವಿಜಯ ದೇವರಕೊಂಡ ಮತ್ತು ರಶ್ಮಿಕಾ ಜೋಡಿಗೆ ದೊಡ್ಡ ಅಭಿಮಾನಿ ಬಳಗವೇ ಹುಟ್ಟಿಕೊಂಡಿತು; ಜೊತೆಯಲ್ಲಿಯೇ ಅವರಿಬ್ಬರ ಲವ್ವಿಡವ್ವಿ ಕುರಿತು ಊಹಾಪೋಹಗಳೂ ಹುಟ್ಟಿಕೊಂಡವು. ವಿಜಯ್ ಜೊತೆ ರಶ್ಮಿಕಾ ಅವರ ಪ್ರೇಮದ ಸುದ್ದಿಗಳಿಗೆ ಸಾಕಷ್ಟು ರೆಕ್ಕೆಪುಕ್ಕ ಬಲಿಯಲು ಬಿಟ್ಟು ನಂತರ ರಶ್ಮಿಕಾ, 'ವಿಜಯ್ ನನಗೆ ಒಳ್ಳೆಯ ಸ್ನೇಹಿತ. ಅದರಾಚೆಗೆ ಏನೂ ಇಲ್ಲ' ಎಂದು ಮಾಧ್ಯಮದವರ ಎದುರು ಕಣ್ಣರಳಿಸಿ ನಕ್ಕುಬಿಟ್ಟರು.

ಈಗ ಮತ್ತೊಮ್ಮೆ ರಶ್ಮಿಕಾ ಮದುವೆ ಕುರಿತು ಗಾಳಿಸುದ್ದಿ ಸದ್ದು ಮಾಡುತ್ತಿದೆ. ಈ ಸಲ ಅವರ ಜೊತೆಗೆ ಯಾವ ಹುಡುಗನ ಹೆಸರೂ ತಳಕು ಹಾಕಿಕೊಂಡಿಲ್ಲ. ಬದಲಿಗೆ, ಸಂದರ್ಶನವೊಂದರಲ್ಲಿ ರಶ್ಮಿಕಾ, 'ನನಗೆ ತಮಿಳುನಾಡಿನ ಸಂಸ್ಕೃತಿ ತುಂಬ ಇಷ್ಟ. ಇಲ್ಲಿನ ಅಡುಗೆಯೂ ಇಷ್ಟವಾಗುತ್ತದೆ. ತಮಿಳಿನ ಹುಡುಗನನ್ನೇ ಮದುವೆಯಾದರೂ ಆಗಬಹುದು' ಎಂದು ಹೇಳಿದ್ದಾರಂತೆ ಎಂಬುದು ಗಾಳಿಸುದ್ದಿಯ ಮೂಲ.

ಇದು ನಿಜವೋ ಸುಳ್ಳೋ, ಈ ಸುದ್ದಿಯನ್ನು ರಶ್ಮಿಕಾ ಅವರಂತೂ ಎಂಜಾಯ್ ಮಾಡುತ್ತಿರುತ್ತಾರೆ. ಯಾಕೆಂದರೆ ಅವರೇ ಒಮ್ಮೆ 'ವಿವಾದಗಳಿಲ್ಲ ಅಂದರೆ ಏನೋ ಕಳೆದುಕೊಂಡ ಹಾಗನಿಸುತ್ತದೆ' ಎಂದು ಹೇಳಿಕೊಂಡಿದ್ದರು. ಈಗ ಬಾಲಿವುಡ್‌ಗೂ ಜಿಗಿದಿರುವ ರಶ್ಮಿಕಾ, ಅಮಿತಾಭ್ ಬಚ್ಚನ್ ಜೊತೆಗೆ 'ಗುಡ್‌ಬೈ' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಸಿದ್ಧಾರ್ಥ ಮೆಲ್ಹೋತ್ರಾ ಜೊತೆಗೆ 'ಮಿಷನ್ ಮಜ್ನು'ಗೆ ಕೂಡ ಇವರೇ ನಾಯಕಿ. ವೃತ್ತಿಜೀವನದ ಉಚ್ಛ್ರಾಯದಲ್ಲಿರುವ ಅವರು ಸದ್ಯಕ್ಕಂತೂ ಮದುವೆಯ ಯೋಚನೆ ಮಾಡಲಾರರು. ಹಾಗಾಗಿ ರಶ್ಮಿಕಾ ಮದುವೆಯ ಕುರಿತು ಇನ್ನಷ್ಟು ಗಾಳಿಸುದ್ದಿಗಳನ್ನು ನಿರೀಕ್ಷಿಸಬಹುದು.

■

